**O.S**.96 /2014

ಡಿ ಡಬ್ಲ್ಯೂ–1

ಸಾಕ್ಷಿಯನ್ನು ದಿಃ 21.06.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀಮತಿ ಎಂ ಎಂ ವಕೀಲರಿಂದಃ**

ನಿಡಿ–3 ದಾಖಲೆ ಮೇಲೆ ಹೆಬ್ಬೆಟ್ಟ ಗುರುತು ಕರಿಯಮ್ಮನದು ಎಂದು ನನ್ನ ದೊಡ್ಡಪ್ಪ ವೀರಪ್ಪ ಹೇಳಿದ್ದಾನೆ. ವೀರಪ್ಪ ಕರಿಯಮ್ಮ ಆ ಮರಣ ಶಾಸನದ ಮೇಲೆ ಹೆಬ್ಬೆಟ್ಟು ಗುರುತು ಹಾಕುವುದು ನೋಡಿದ್ದೇನೆ ಎಂದು ನನಗೆ ಹೇಳಿದ್ದ. ನಿಡಿ–3 ರಲ್ಲಿ ಕರಿಯಮ್ಮ ಹೆಬ್ಬೆಟ್ಟು ಇದೆ ಎಂದು ಹೇಳುವ ದಾಖಲೆ ಹೊರತು ಪಡಿಸಿ ಕರಿಯಮ್ಮನ ಹೆಬ್ಬೆಟ್ಟು ಇರುವ ಬೇರೆ ದಾಖಲೆ ನಾವು ಹಾಜರು ಮಾಡಿಲ್ಲ. ಕರಿಯಮ್ಮನ ಹೆಬ್ಬೆಟ್ಟು ಯಾರು ಗುರುತಿಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನಿಡಿ–3 ಕರಿಯಮ್ಮ ಬರೆದಿದ್ದಾಳೆ ಎಂದು ವೀರಪ್ಪ ನನಗೆ ಹೇಳಿದ್ದಾಳೆ. ಆದರೆ ಆ ದಾಖಲೆ ಬರೆಯುವಾಗ ವೀರಪ್ಪ ತಾನು ಹಾಜರಿದ್ದ ಎಂದು ಹೇಳಿರಲಿಲ್ಲ. ನಿಡಿ–3 ಯಾರು

ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-3 ರ ವಿಲ್ ನಲ್ಲಿ ಯಾರು ಸಾಕ್ಷಿದರರು ಮತ್ತು ಅದನ್ನು ಯಾರು ಬರೆದಿದ್ದಾರೆ ಎಂದು ದಾಖಲೆ ನೋಡಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಪ್ರತಿವಾದಿ ವೀರಪ್ಪ ಆ ಕುರಿತು ಹೇಳಿದ್ದ ಎಂದು ಉತ್ತರಿಸುತ್ತಾರೆ.

ನಿಡಿ-3 ಕ್ಕೆ ಕೊರಮಪ್ಪನ ಹೆಂಡತಿ ಕರಿಯಮ್ಮ ಸಹಿ ಹಾಕಿಲ್ಲ ಮತ್ತು ಆ ದಾಖಲೆ ವೀರಪ್ಪನಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-3 ನ್ನು ವೀರಪ್ಪ ಸೃಷ್ಟಿ ಮಾಡಿದ್ದಾನೆ ಅನ್ನುವುದು ಸುಳ್ಳು. ನಿಡಿ-3 ತಯಾರಿಸಿದ ದಿನ ಕರಿಯಮ್ಮ ತಾಲೂಕು ಕಛೇರಿಗೆ ಹೋಗಿಲ್ಲ ಮತ್ತು ಸಹಿ ಹಾಕಿಲ್ಲ ಎನ್ನುವುದು ಸರಿಯಲ್ಲ. 1982 ನಲ್ಲಿ ದಾವಾಸ್ತಿ ಕರಿಯಮ್ಮನ ಹೆಸರಿಗೆ ಖಾತೆ ಇರಲಿಲ್ಲ ಅನ್ನುವುದು ಸರಿಯಲ್ಲ. ದಾವಾ ಸ್ವತ್ತಿನ ಖಾತೆಗಳು 1991 ರ ವರೆಗೆ ಕೊರಮಪ್ಪನ ಹೆಸರಿಗೆ ಇದ್ದವು ಅನ್ನುವುದು ಸರಿಯಲ್ಲ. ನಿಪಿ-7 ರಿಂದ 10 ದಾಖಲೆಗಳ ಪ್ರಕಾರ ವಿಲ್ ದಾಖಲೆ ಬರೆಯುವ ಹೊತ್ತಿಗೆ ದಾವಾ ಸ್ವತ್ತುಗಳು ಕೊರಮಪ್ಪನ ಹೆಸರಿಗೆ ಇತ್ತು ಅನ್ನುವುದು ಸರಿಯಲ್ಲ.

ನಾನು ಹಾಜರು ಮಾಡಿರುವ 3 ಮರಣ ಶಾಸನಗಳು ಮತ್ತು ಕ್ರಯ ಪತ್ರಗಳು ಹಾಗೂ ಪಹಣಿ ಪತ್ರಿಕೆಗಳು ಪ್ರತಿವಾದಿ ವೀರಪ್ಪ ನನಗೆ ಕೊಟ್ಟಿದ್ದ. ವೀರಪ್ಪ ತಾನು ಸಾಯುವ ಒಂದು ತಿಂಗಳ ಹಿಂದೆ ಈ ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದ. ನಾನು ತಕರಾರು ಸಲ್ಲಿಸಿಲ್ಲ. ವೀರಪ್ಪ ತನ್ನ ತಕರಾರು ಸಲ್ಲಿಸಿದ್ದಾನೆ. ವೀರಪ್ಪ ತನ್ನ ಹೇಳಿಕೆಯಲ್ಲಿ ನಾನು ಹಾಜರು ಮಾಡಿರುವ ಮರಣ ಶಾಸನಗಳು ಮತ್ತು ಕ್ರಯ ಪತ್ರಗಳ ಬಗ್ಗೆ ಹೇಳಿಲ್ಲ ಅನ್ನುವುದು ಸರಿಯಲ್ಲ . ಕರಿಯಮ್ಮ ದಾವಾ ಸ್ವತ್ತಿನ ಬಗ್ಗೆ ಯಾವತ್ತು ವೀರಪ್ಪನ ಹೆಸರಿಗೆ ಮರಣ ಶಾಸನ ಬರೆದುಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನಿಡಿ-3 ರ ಛಾಪಾಕಾಗದಗಳನ್ನು ಸಹ ಕರಿಯಮ್ಮ ತಂದಿಲ್ಲ ಅನ್ನುವುದು ಸುಳ್ಳು.

ಈಗ ನನಗೆ ತೋರಿಸುತ್ತಿರುವ ವೀರಪ್ಪನು ನನ್ನ ಹೆಸರಿಗೆ ದಿಃ28.08.1995 ರಂದು ಮಾಡಿದ್ದಾನೆ. ಸಾಕ್ಷಿ ಪುನಃ 4 ಜನರ ಹೆಸರಿಗೆ ವಿಲ್ ಆಗಿದೆ ಎಂದು ಹೇಳುತ್ತಾರೆ. ಅವರ ಹೆಸರು

ಅಣ್ಣಪ್ಪ, ವೈ ಕೆ ಕುಮಾರ ಸ್ವಾಮಿ, ವಿಶ್ವೇಶ್ವರಯ್ಯ , ಲೋಕೇಶ್ . ಸದರಿ ವಿಲ್ ವೀರಪ್ಪ ಮತ್ತು ಆತನ ಹೆಂಡತಿ ಪುಟ್ಟಮ್ಮ ಮಾಡಿದ್ದಾರೆ. ಆ ವಿಲ್ ನಲ್ಲಿ ಸರ್ವೆ ನಂ.11/1 ಅಂದರೆ 1 ನೇ ಐಟಂ ಮತ್ತು 2 ನೇ ಐಟಂ ಆಸ್ತಿ ಮಾಡಿದ್ದಾನೆ. ಸರ್ವೆ ನಂ.3 ರಲ್ಲಿ 6 ಎಕರೆ 1 ಗುಂಟೆ ಮತ್ತು ಸರ್ವೆ ನಂ.11/1 ರಲ್ಲಿ 7 ಎಕರೆ 30 ಗುಂಟೆ. ಸರ್ವೆ ನಂ.112/1 ಎ ರಲ್ಲಿ 2 ಎಕರೆ 25 ಗುಂಟೆ 1 ಬಿ ರಲ್ಲಿ 3 ಎಕರೆ 7 ಗುಂಟೆ , ಸರ್ವೆ ನಂ.104 ರಲ್ಲಿ 34 ಗುಂಟೆ ಹಾಗೂ 1 ಅಂಚಿನ ಮನೆ ಬರೆದುಕೊಟ್ಟಿದ್ದಾನೆ. ಸದರಿ ಹಂಚಿನ ಮನೆಯ ಖಾತೆ ಸಂಖ್ಯೆ ಗೊತ್ತಿಲ್ಲ. ಸದರಿ ಹಂಚಿನ ಮನೆಯ ವಿಸ್ತೀರ್ಣ 40* 30 ಅಡಿ. ಮೇಲೆ ಹೇಳಿರುವ ಎಲ್ಲಾ ಆಸ್ತಿಗಳು ವಿಲ್ ಪ್ರಕಾರ ನಾವು 4 ಜನ ಸಹೋದರರ ಹೆಸರಿಗೆ ಜಂಟಿ ಖಾತೆಯಾಗಿದೆ.

ನಿಡಿ-4 ರ ವಿಲ್ ಸಿದ್ದಲಿಂಗಯ್ಯ ಬರೆದಿದ್ದಾನೆ. ಅದಕ್ಕೆ ಸಾಕ್ಷಿದಾರರಾಗಿ ರಾಮಯ್ಯ, ನಾರಾಯಣಪ್ಪ, ಇಬ್ರಾಹಿಂ ಸಾಹೇಬ್ ಮತ್ತು ನಿಂಗಾರೆಡ್ಡಿ ಸಹಿ ಮಾಡಿದ್ದಾರೆ. ಇವರೆಲ್ಲರೂ ಸಹಿ ಮಾಡಿದ್ದನ್ನು ನಾನು ನೋಡಿಲ್ಲ, ಆದರೆ ದಾಖಲೆ ನೋಡಿ ಹೇಳುತ್ತಿದ್ದೇನೆ. ನಿಡಿ-4 ವೀರಪ್ಪ ಮತ್ತು ಆತನ ಹೆಂಡತಿ ಪುಟ್ಟಮ್ಮ ನಾವು 4 ಜನ ಸಹೋದರರಿಗೆ ಬರೆದುಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನಿಡಿ-4 ರಲ್ಲಿರುವ ಸಹಿಗಳು ವೀರಪ್ಪ ಮತ್ತು ಪುಟ್ಟಮ್ಮನಿಗೆ ಸೇರಿದ್ದಲ್ಲ ಅನ್ನುವುದು ಸರಿಯಲ್ಲ. ನಿಡಿ-4 ಕ್ಕೆ ಪುಟ್ಟಮ್ಮ ಮತ್ತು ವೀರಪ್ಪ ಎಷ್ಟು ಸಹಿಗಳನ್ನು ಹಾಕಿದ್ದಾರೆ ಅನ್ನುವುದು ನಾನು ನೋಡಿಲ್ಲ. ಸಾಕ್ಷಿದಾರರು ನಿಡಿ-4 ಕ್ಕೆ ಒಂದು ಕಡೆ ಸಹಿ ಹಾಕಿದ್ದಾರೆ. ದಾವಾಸ್ವತ್ತುಗಳ ಬಗ್ಗೆ ಮರಣ ಶಾಸನ ಬರೆದುಕೊಟ್ಟ ಹಕ್ಕು ಅಥವಾ ಅಧಿಕಾರ ವೀರಪ್ಪನಿಗಾಗಲೀ ಆತನ ಹೆಂಡತಿಗಾಗಲಿ ಇರಲಿಲ್ಲ ಅನ್ನುವುದು ಸರಿಯಲ್ಲ.

ನಿಡಿ-5 ನ್ನು ವೀರಪ್ಪ ನನ್ನ ಹೆಸರಿಗೆ ಮಾಡಿಕೊಟ್ಟಿದ್ದಾನೆ. ಸಾಕ್ಷಿ ಸ್ವತಃ 2 ಎಕರೆ 25 ಗುಂಟೆ ಆಸ್ತಿ ಬಗ್ಗೆ ಆ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಸರ್ವೆ ನಂ.11/3

ಆಗಿದೆ. ಸದರಿ ಸರ್ವೆ ನಂ.11/3 ನನ್ನ ತಾತ ಕದುರಪ್ಪನಿಗೆ ಸೇರಿದ ಆಸ್ತಿ ಅನ್ನುವುದು ನಿಜ. ಆದರೆ ಆ ಜಮೀನು ನಾವು ವಿಭಾಗ ಮಾಡಿಕೊಂಡಿರುವುದಿಲ್ಲ. ಒಟ್ಟು 13 ಜನರಿಗೆ ಸದರಿ ಜಮೀನಿನಲ್ಲಿ ಹಿಸ್ಸೆ ಹಕ್ಕು ಇದ್ದು ವೀರಪ್ಪನಿಗೆ ನಿಡಿ-5 ಬರೆದುಕೊಡುವ ಹಕ್ಕು ಇರಲಿಲ್ಲ ಅನ್ನುವುದು ಸರಿಯಲ್ಲ. ನಿಡಿ-5 ನ್ನು ವೀರಪ್ಪ ಬರೆದುಕೊಟ್ಟಿಲ್ಲ ಅನ್ನುವುದು ಸರಿಯಲ್ಲ.

ನಾನು ಹಾಜರು ಮಾಡಿರುವ ಕ್ರಯಪತ್ರಗಳು ಯಾವ ಜಮೀನಿಗೆ ಸಂಬಂಧಿಸಿವೆ ಮತ್ತು ಯಾರು ಯಾರಿಗೆ ಬರೆದುಕೊಟ್ಟ ದಾಖಲೆಗಳು ಅನ್ನುವುದು ಗೊತ್ತಿಲ್ಲ. ಆ ಕ್ರಯ ಪತ್ರದಡಿ ಯಾರು ಜಮೀನನ್ನು ಖರೀದಿಸಿದ್ದಾರೆ ಅನ್ನುವುದು ಗೊತ್ತಿಲ್ಲ. ಕ್ರಯ ಪತ್ರದಲ್ಲಿರುವ ಆಸ್ತಿಗಳು ನಾವು 1 ರಿಂದ 13 ನೇ ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿದ್ದಾಗ ಖರೀದಿಸಿದ ಆಸ್ತಿಗಳು ಅನ್ನುವುದು ನಿಜ.

ನಿಡಿ-15 ರ ವಂಶವೃಕ್ಷ ಎಲ್ಲಾ ಸದಸ್ಯರ ಬಗ್ಗೆ ಇರುವುದಿಲ್ಲ ಅನ್ನುವುದು ಸರಿಯಲ್ಲ. ನಿಡಿ-15 ರಲ್ಲಿರುವ ಹೆಬ್ಬೆಟ್ಟಿನ ಗುರುತು ಯಾರದು ಎಂದು ಕಾಣಿಸಿಲ್ಲ ಅನ್ನುವುದು ನಿಜ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು)**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.